# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.61/2019

**DW**:3

**ದಿನಾಂಕ 03.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಐ.ಎಸ್.ಎಮ್. ವಕೀಲರಿಂದ:**

ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯನ್ನು ನಾನೇ ಬರೆದು ಹಾಕಿರುತ್ತೇನೆ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಗೆ ನಮ್ಮ ವಕೀಲರು ಮಾಹಿತಿ ನೀಡಿರುತ್ತಾರೆ. 1 ನೇ ವಾದಿ ಮತ್ತು ಪ್ರತಿವಾದಿಯರು ಅಣ್ಣ ತಮ್ಮಂದಿರು. ಸದರಿ 1 ನೇ ವಾದಿ ಮತ್ತು ಪ್ರತಿವಾದಿಯರಿಗೆ ಮೂಲಃ ಆಸ್ತಿ ನಂ.394 ಎಂದರೆ ಸರಿ. ಸದರಿ ಆಸ್ತಿಯು 1 ನೇ ವಾದಿ ಮತ್ತು ಪ್ರತಿವಾದಿಯರಿಗೆ ಅವರ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ರೂಗಿಯಿಂದ ಮಸಳಿಗೆ ಸರ್ಕಾರಿ ಹಾದಿ ಇರುತ್ತದೆ ಎಂದರೆ ಸರಿ. ಸದರಿ ಸರ್ಕಾರಿ ಹಾದಿಯ ಉತ್ತರಕ್ಕೆ ಅಂದರೆ ಹಳ್ಳದ ಕಡೆ ದಾರಿ ಇರುತ್ತದೆ ಎಂದರೆ ಸರಿ. ಸದರಿ ವಹಿವಾಟು ದಾರಿಯು ಹಳ್ಳದ ತನಕ ಇರುತ್ತದೆ ಎಂದರೆ ಸರಿಯಲ್ಲ. ಹಳ್ಳದ ಕಡೆ ಹೋಗುವ ವಹಿವಾಟು ದಾರಿಯನ್ನು ಗ್ರಾಮ ನಕಾಶೆಯಲ್ಲಿ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ಕಾರದವರು ಕೆನಾಲ್ ಬಂದ ಕಾರಣ ಕೆನಾಲ್ ರಸ್ತೆಯನ್ನು ಹಳ್ಳದ ತನಕ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು 1 ನೇ ವಾದಿ ಮತ್ತು ಪ್ರತಿವಾದಿಯರ ಜಮೀನನ್ನು ನೋಡಿರುತ್ತೇನೆ. 1 ನೇ ವಾದಿ, ಪ್ರತಿವಾದಿಯರು ಮತ್ತು ಅವರ ಹಿರಿಯರು ಸರ್ವೆ ನಂ.394 ಕ್ಕೆ ಹೋಗಬೇಕಾದರೆ ಹಿರೆರೂಗಿ–ಮಸಳಿ ಸರ್ಕಾರಿ ರಸ್ತೆಯಿಂದ ಹೋಗಿ ಹಳ್ಳದ ರಸ್ತೆ ಗುಂಟಾ ತಮ್ಮ ಜಮೀನಿಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.394 ಇದು ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.394 ಕ್ಕೆ 1 ನೇ ವಾದಿ ಮತ್ತು ಪ್ರತಿವಾದಿಯರು ಹಾಗೂ ಅವರ ಹಿರಿಯರು ಹೇಗೆ ಹೋಗುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಕೆಳಗಡೆ ಹಾದಿ ಇದೆ ಆ ಮಾರ್ಗವಾಗಿ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. 1 ನೇ ವಾದಿ, ಪ್ರತಿವಾದಿಯರು ಹಾಗೂ ಅವರ ಹಿರಿಯರು ಸರ್ವೆ ನಂ.394 ಕ್ಕೆ ಹಿರೇರೂಗಿ–ಮಸಳಿ ರಸ್ತೆಯ ಮುಖಾಂತರ ಹೋಗಿ ಹಳ್ಳದ ರಸ್ತೆ ಗುಂಟಾ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.394 ರ ಪೂರ್ವಕ್ಕೆ ಸರ್ವೆ ನಂ.393 ಇರುತ್ತದೆ ಎಂದರೆ ಸರಿ. ಸರ್ವೆ ನಂ.393 ಕ್ಕೆ ಹೋಗಲು 1 ನೇ ವಾದಿ ಮತ್ತು

ಪ್ರತಿವಾದಿಯರು ದಾರಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾರಿ ಕೊಟ್ಟಿರುವ ಬಗ್ಗೆ ಡೈರಿ ಆಗಿರುತ್ತದೆ ಎಂದರೆ ಸರಿಯಲ್ಲ.

1 ನೇ ವಾದಿ ಮತ್ತು ಪ್ರತಿವಾದಿಯರು 1973 ನೇ ಇಸವಿಯಲ್ಲಿ ಸರ್ವೆ ನಂ.394 ಕ್ಕೆ ಸಂಬಂಧಿಸಿದಂತೆ ವಾಟ್ನಿ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ವಾಟ್ನಿಯಲ್ಲಿ ಸರ್ವೆ ನಂ.394 ಕ್ಕೆ ಸಂಬಂಧಿಸಿದಂತೆ 3 ಪಟ್ಟಿಗಳು ಆಗಿದ್ದು ಅವು ಸರ್ವೆ ನಂ.394/1 ರಿಂದ 394/3 ಎಂದು ಇರುತ್ತವೆ ಎಂದರೆ ಸರಿ. ಸರ್ವೆ ನಂ.394/1 ಇದು 1 ನೇ ಪ್ರತಿವಾದಿಗೆ, ಸರ್ವೆ ನಂ.394/2 ಇದು 2 ನೇ ಪ್ರತಿವಾದಿಗೆ ಮತ್ತು ಸರ್ವೆ ನಂ.394/3 ಇದು 1 ನೇ ವಾದಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ.394/3 ರಲ್ಲಿ 1 ನೇ ವಾದಿ ಮತ್ತು ಆತನ ಮಕ್ಕಳು ವಾಟ್ನಿ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಬಂದಿರುವ ಜಮೀನು ಹಳ್ಳಕ್ಕೆ ರಸ್ತೆಗೆ ಹತ್ತಿ ಪೂರ್ವಕ್ಕೆ ಇರುತ್ತವೆ ಎಂದರೆ ಸರಿ. ಪ್ರತಿವಾದಿಯರ ಜಮೀನಿನ ಪೂರ್ವ ದಿಕ್ಕಿಗೆ ವಾದಿಯರ ಜಮೀನು ಬರುತ್ತದೆ ಎಂದರೆ ಸರಿ. 1973 ರಿಂದ ಇಲ್ಲಿಯತನಕ ವಾದಿಯರು ಪ್ರತಿವಾದಿಯ ಜಮೀನಿನಿಂದ ಹಾದು ಹೋಗುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ 2 ನೇ ಪ್ರತಿವಾದಿಯ ಜಮೀನಿನ ಉತ್ತರ ದಿಕ್ಕಿಗೆ ವರ್ಷದ 12 ತಿಂಗಳು ವ್ಯವಸಾಯದ ಸಾಮಗ್ರಿಗಳು ಮತ್ತು ಗಾಡಿಗಳನ್ನು ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿಯಲ್ಲ. ಸದರಿ ಹಾದಿಯನ್ನು ಬಿಟ್ಟು ವಾದಿಯರಿಗೆ ಬೇರೆ ಹಾದಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಜಮೀನಿನಲ್ಲಿ ಹಾದಿ ಇದ್ದ ಬಗ್ಗೆ ಸರ್ವೆಯರ್ ಬಂದು ವರದಿ ಕೊಟ್ಟಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿಯರ ಜಮೀನಿನಲ್ಲಿ ಹಾದಿ ಇರುತ್ತದೆ ಎಂದರೆ ಸಾಕ್ಷಿಯು ವಕೀಲರಿಗೆ ನೀವು ಬಂದು ನೋಡಿ ಎಂದು ನುಡಿಯುತ್ತಾರೆ.

ನನ್ನ ಮಗಳ ಭೌರವ್ವ ಎಂದರೆ ಸರಿ. ನನ್ನ ಮಗಳನ್ನು 1 ನೇ ಪ್ರತಿವಾದಿಯ ಮಗ ಶಿವಯೋಗಿ ಇವರಿಗೆ ಮದುವೆ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ಬೀಗರು ಆಗಬೇಕಾಗಿರುವ ಕಾರಣ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ವಕೀಲರಿಗೆ ನೀವು ಬಂದು ನೋಡಿ ಎಂದು ಮರುಪ್ರಶ್ನೆ ಹಾಕಿರುತ್ತಾರೆ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಯರಿಗೆ ಬೇರೆ ದಾರಿ ಇರುತ್ತದೆ ಎಂದು ಸಾಕ್ಷ್ಯಾಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.